### ಬದಲಾಗಬೇಕಿದೆ ಮನಸ್ಥಿತಿ

‘ಮರ್ಯಾದೆಗೇಡು ಹತ್ಯೆ; ಮನುಷ್ಯತ್ವಕ್ಕೆ ಸವಾಲು’ (ಜ. 15, ಕೆ. ನೀಲಾ) ಪ್ರಚಲಿತ, ಚರ್ಚಿತ ವಿಷಯದ ಮೇಲೆ ಬೆಳಕು ಚೆಲ್ಲಿದೆ. ಬಡ ಮಧ್ಯಮ ವರ್ಗದಲ್ಲಿ ಮಾತ್ರ ಈ ಪಿಡುಗು ಇರದೆ ಶ್ರೀಮಂತ ಕುಟುಂಬದಲ್ಲಿಯೂ ಸದ್ದಿಲ್ಲದೆ ನಡೆಯುತ್ತಿರುತ್ತದೆ. ಬೆರಳೆಣಿಕೆಯಷ್ಟು ಘಟನೆಗಳು ಬೆಳಕಿಗೆ ಬರುತ್ತವೆ, ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ಮುಚ್ಚಿಹೋಗುತ್ತವೆ. ಕೇವಲ ಕಾನೂನಿನ ಮೂಲಕ ಇದಕ್ಕೆ ಕಡಿವಾಣ ಸಾಕಾಗದು, ಕಾಲ ಬದಲಾದಂತೆ, ಪರಿಸ್ಥಿತಿಗಳು ಬದಲಾದಂತೆ ಮನಸ್ಥಿತಿಯನ್ನೂ ಬದಲಾಯಿಸಿಕೊಳ್ಳುವ ಅಗತ್ಯ ಇದೆ.

—ಸಿ.ಕೆ. ಗಣಪ್ಪನವರ ಮುಂಡರಗಿ, ಗದಗ

### ಕಾನೂನು ಕ್ರಮ ಬಿಗಿಯಾಗಲಿ

ಲೇಖನ ಓದಿದ ನಂತರ ಹುಬ್ಬಳ್ಳಿಯಲ್ಲಿ ನಡೆದ ಘಟನೆಯಿಂದ ಮೊದಲೇ ನೊಂದಿದ್ದ ಮನಸ್ಸು




ಚಿಂತನೆಗೆ ಶುರುವಾಯಿತು. ಹದಿನೈದು ವರ್ಷಗಳ ಹಿಂದಿನ ಮಂಡ್ಯದ ಘಟನೆ ಕಣ್ಣೀರು ತರಿಸಿತು.

‘ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ’ ಎಂಬ ಸರ್ವಜ್ಞನ ನುಡಿ ಬರೀ ಓದಲಷ್ಟೇ? ಕ್ಷಣಕಾಲದ ಕೋಪದ ಕೈಗೆ ಬುದ್ಧಿ ಕೊಟ್ಟು ಮಕ್ಕಳನ್ನು ಕ್ರೂರವಾಗಿ ಕೊಂದು ಏನು ಸಾಧಿಸುವರು. ಕಟುಕರಿಗೆ ಕಾನೂನಿನ ಕುಣಿಕೆ ಬಿಗಿಯಾಗಬೇಕು.

—ಕಮಲಾ ರಾವ್, ಬೆಂಗಳೂರು

### ಎಚ್ಚೆತ್ತುಕೊಳ್ಳಬೇಕು

ಸಮಾಜದಲ್ಲಿ ಇರುವ ಒಂದು ಅಸಹಜವಾದ ಸಮಸ್ಯೆಯ ಬಗ್ಗೆ ಬೆಳಕು ಚೆಲ್ಲಿದ ಬರಹ. ಈ ಸಮಸ್ಯೆಯಿಂದ ಬಹಳ ಹಿಂದಿನ ಕಾಲದಿಂದಲೂ ನಮ್ಮ ಸಮಾಜ ಬಳಲಿದೆ. ಇದಕ್ಕಾಗಿ ಕಾನೂನು ಸರಿಯಾದ ವ್ಯವಸ್ಥೆ ಮಾಡಬೇಕಿದೆ ಮತ್ತು ಜನರು ಎಚ್ಚೆತ್ತುಕೊಳ್ಳಬೇಕು.

—ಎಸ್. ವಿಜಯಕುಮಾರಿ, ಬೆಂಗಳೂರು

### ಮಾನವೀಯತೆ ಬೆಳಗಲಿ

ಮನ ಕದಡಿಸುವ ಸಂಗತಿಯಿದು. ಕಾನೂನಿನ ಸೂಕ್ತ ಕ್ರಮಗಳು ಶೀಘ್ರವಾಗಿ ಜಾರಿಗೆ ಬರಲೆಂದು ನಿರೀಕ್ಷಿಸುತ್ತೇನೆ. ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರವು ಸುಟ್ಟು ಭಸ್ಮವಾಗಲಿ, ಪರಿಶುದ್ಧತೆ, ತಾಳ್ಮೆ, ಸಂಯಮ, ನಮ್ರತೆ, ಶ್ರದ್ಧೆ, ಪ್ರೀತಿ, ಕರುಣೆ ನೆಲೆಯೂರಲಿ, ಮಾನವೀಯತೆ ಮೆರೆಯಲಿ...

—ಸುಪೋಷಿಣಿ, ಬೆಂಗಳೂರು

### ಆರೋಗ್ಯ ಜಾಗೃತಿಗೆ ಪೂರಕ

‘ಎನ್‌ಜಿಎಸ್ ಕ್ರಾಂತಿ; ರೋಗ ಪತ್ತೆಯಲ್ಲಿ ಆಮೂಲಾಗ್ರ ಬದಲಾವಣೆ’ (ಜ. 15, ಡಾ. ಶಾಂತಕುಮಾರ ಮುರುಡಾ) ಲೇಖನ, ಎನ್‌ಜಿಎಸ್ ತಂತ್ರಜ್ಞಾನದ ಮಹತ್ವವನ್ನು ಸಾಮಾನ್ಯ ಓದುಗರಿಗೂ ಅರ್ಥವಾಗುವಂತೆ ವಿವರಿಸಿದೆ. ರೋಗ ನಿರ್ಣಯದಲ್ಲಿ ನಿಖರತೆ ಹೆಚ್ಚಿದರೆ ಚಿಕಿತ್ಸೆಗೂ ಸರಿಯಾದ ದಿಕ್ಕು ಸಿಗುತ್ತದೆ; ಜೊತೆಗೆ ಸಮಯ ಮತ್ತು ಹಣದ ನಷ್ಟವೂ ಕಡಿಮೆ ಆಗಬಹುದು ಎಂಬ ವಿಚಾರ ನಿಜ. ಸಾರ್ವಜನಿಕ ಆರೋಗ್ಯ ಜಾಗೃತಿಗೆ ಸಹಾಯಕವಾಗುವ ಲೇಖನ.



—ಡಾ. ಶಿಲ್ಪಾ ಎಚ್.ಡಿ., ಬೆಂಗಳೂರು

### ಭವಿಷ್ಯದ ಕ್ರಾಂತಿ

ಎನ್‌ಜಿಎಸ್, ರೋಗ ಪತ್ತೆಯಲ್ಲಿ ಬದಲಾವಣೆ ಮಾಡುವ ಸಂಭವ ಸಂತೋಷದ ವಿಚಾರ. ಚಿಕಿತ್ಸೆಯ ಪ್ರಕ್ರಿಯೆಯನ್ನು ವೇಗಗೊಳಿಸುವ ಮೂಲಕ ರೋಗಿಗಳ ಫಲಿತಾಂಶವನ್ನು ಸುಧಾರಿಸುವ ಹಾಗೂ ಕೆಲವು ರೋಗ ನಿರ್ಣಯಗಳನ್ನು ಬಹಿರಂಗಪಡಿಸುವ ಸಾಮರ್ಥ್ಯದೊಂದಿಗೆ ಉತ್ತಮ ಭವಿಷ್ಯ ಎನ್‌ಜಿಎಸ್‌ನಲ್ಲಿ ಬೇಗನೇ ಬರಲಿ.

—ಹೀರಾ ರಮಾನಂದ

### ಉಳಿತಾಯದ ಮಹತ್ವ ತಿಳಿಸಿದ ಅಂಕಣ

‘ಸಂಕಲ್ಪದಲ್ಲಿ ಉಳಿತಾಯವೂ ಸೇರಲಿ’ (ಜ. 15, ಗಿರೀಶ್ ಸಿ.ಜಿ.) ‘ಉಳಿಕೆ–ಹೂಡಿಕೆ’ ಲೇಖನ ಉಳಿತಾಯದ ಮಹತ್ವವನ್ನು ಓದುಗರಿಗೆ ತಿಳಿಹೇಳಿದೆ. ಹೊಸ ವರ್ಷದಲ್ಲಿ ಕೈಗೊಳ್ಳುವ ಹಲವಾರು ಸಂಕಲ್ಪಗಳಲ್ಲಿ, ತಮಗಿರುವ ಆದಾಯದಲ್ಲಿ ಸಣ್ಣ ಉಳಿತಾಯವನ್ನು ಮಾಡುವ ಸಂಕಲ್ಪ ಕೈಗೊಳ್ಳುವುದು ಭವಿಷ್ಯದ ದೃಷ್ಟಿಯಿಂದ ಒಳ್ಳೆಯದು. ಈ ಬಗ್ಗೆ ಲೇಖನದಲ್ಲಿ ಸೂಕ್ತ ವಿವರಗಳನ್ನು ಒದಗಿಸಿದ್ದಾರೆ. ಆರ್ಥಿಕ ಸಂಕಷ್ಟಕ್ಕೆ ಒಳಗಾಗದಂತೆ, ವೈದ್ಯಕೀಯ ಹಾಗೂ ಜೀವ ವಿಮೆಗಳನ್ನು ಹೊಂದುವುದು ಕೂಡ ಉಳಿತಾಯಕ್ಕೆ ಸರಿ ಸಮಾನ ಎಂಬುದನ್ನು ಒಪ್ಪಬಹುದಾಗಿದೆ. ಒಟ್ಟಿನಲ್ಲಿ ಉಳಿತಾಯದ ಹಣ ಸಂಕಷ್ಟದಲ್ಲಿ ಸಹಕಾರಿಯಾಗುವುದಂತೂ ಸತ್ಯ.

—ಚಂದ್ರಕುಮಾರ್ ಡಿ., ಬೆಂಗಳೂರು

### ಎವರ್‌ಗ್ರೀನ್ ‘ಆಕಾಶವಾಣಿ’



‘ಆಕಾಶವಾಣಿಗೆ ತೊಂಬತ್ತು; ಮಾಧ್ಯಮ ಲೋಕದ ಗಮ್ಮತ್ತು’ (ಜ. 15, ಲತಾ ವಿಶ್ವನಾಥ್ ಉಪ್ಪೋಣಿ) ಬರಹ ಸಕಾಲಿಕವಾಗಿದೆ. ನಸುಕಿನ ನಾದಸ್ವರಗಳ ಪ್ರತಿಧ್ವನಿಸುತ್ತಾ... ಚಲನಚಿತ್ರ ಧ್ವನಿವಾಹಿನಿ, ನಾಟಕ, ರಾಷ್ಟ್ರೀಯ ಸಂಗೀತ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುತ್ತಿದ್ದ ಆಕಾಶವಾಣಿ ಈಗ ಶತಮಾನೋತ್ಸವದ ಹೊಸ್ತಿಲಲ್ಲಿರುವುದು ಖುಷಿ. ಆಕಾಶವಾಣಿ ‘ಎವರ್ ಗ್ರೀನ್’ ಮಿನುಗುತಾರೆ.

—ಸುಮನಾ

### ಆಸಕ್ತಿಕರ ‘ರೀಲ್ ಮಾಡೆಲ್’

‘ರೀಲ್ ಮಾಡೆಲ್’ ಅಂಕಣದಡಿ ವೈವಿಧ್ಯಮಯ ವಸ್ತು, ವಿಷಯಗಳನ್ನು ಇಟ್ಟುಕೊಂಡು ರೀಲ್ಸ್ ಮಾಡುತ್ತಿರುವ ವ್ಯಕ್ತಿಗಳ ಪರಿಚಯ ಆಸಕ್ತಿಕರವಾಗಿದೆ. ಜ. 15ರ ಸಂಚಿಕೆಯಲ್ಲಿ ಗೌರಮ್ಮ ಕಟ್ಟಿಮನಿ ಅವರು ‘ಅಮೋಘ’ ದೇಶಭಕ್ತಿ... ಹೆಸರಿನಲ್ಲಿ ಪರಿಚಯಿಸಿರುವ ಅಮೋಘ ಹಿರೇಮಠರ ಸಾಧನೆ ಕುರಿತು ಓದಿ ಸಂತೋಷವಾಯಿತು. ದೇಶಭಕ್ತಿ ಬಗ್ಗೆ ರೀಲ್ಸ್ ಮಾಡುತ್ತಾ, ಯುವಜನತೆಗೆ ಒಳ್ಳೆಯ ಸಂದೇಶ, ಪ್ರೇರಣೆ ನೀಡುತ್ತಿರುವುದು ಶ್ಲಾಘನೀಯ.

—ಬಿ.ವಿ. ರಾಜಲಕ್ಷ್ಮಿ, ಬೆಂಗಳೂರು

### ನಗು ಉಕ್ಕಿಸಿತು

‘ಉಚಿತ ಸಲಹೆಗಳೂ, ಪೀಡನಗಳೂ...’ (ಜ. 15, ಕೆ.ವಿ. ರಾಜಲಕ್ಷ್ಮಿ) ‘ಮಂದಹಾಸ’ ಬರಹ ಬಹಳ ಚೆನ್ನಾಗಿದೆ. ಉಚಿತ ಸಲಹೆಗಳು, ಅವುಗಳನ್ನು ಲೇಖಕಿ ಅನುಸರಿಸಿದ, ನಿಭಾಯಿಸಿದ ರೀತಿ ನಗು ಉಕ್ಕಿಸಿತು.

—ಕೆ. ಸಂಜಯ್, ಬೆಂಗಳೂರು

### ವಿಶಿಷ್ಟ ‘ಅಪ್ಪೆಮಿಡಿ’

‘ಮಲೆನಾಡ ಸಾಂಪ್ರದಾಯಿಕ ಸ್ವಾದಕ್ಕೆ ಜಾಗತಿಕ ಮನ್ನಣೆ’ (ಜ. 15, ಅರ್ಪಿತರಾಣಿ ಎ.ಎಸ್.) ಲೇಖನ ವಿಶೇಷವೆನಿಸಿತು.

ವಿಶಿಷ್ಟ ಘಾಟು, ವಿಭಿನ್ನ ಆಕಾರ ಮತ್ತು ವರ್ಣಗಳ ಕಾಲ ಕೆಡದೆ ಇರುವ ಅಪ್ಪೆಮಿಡಿ ಎಂಬ ತಳಿ ಹಾಗೂ ಅದಕ್ಕೆ ದೊರೆತಿರುವ ಮಾನ್ಯತೆ ಕುರಿತಂತೆ ಬಹಳಷ್ಟು ವಿಚಾರಗಳನ್ನು ವಿಸ್ತೃತವಾಗಿ ತಿಳಿಸಿಕೊಟ್ಟಿದ್ದಾರೆ.

—ಲಕ್ಷ್ಮಣರಾವ್ ಎಂ.ಎಲ್.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in